KACD520005352025

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಹೊಸದುರ್ಗ.

ಉಪಸ್ಥಿತರು:- ಶ್ರೀ ವೈ. ಕೆ. ಬೇನಾಳ, ಬಿ.ಎ., ಎಲ್.ಎಲ್.ಬಿ., (ಆನರ್ಸ), ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು, ಹೊಸದುರ್ಗ.

ದಿನಾಂಕ **04** ನೇ ಜೂನ್ **- 2026**

ಆರ್.ಎ. ಸಂಖ್ಯೆ: **35/2025** ಮತ್ತು
ಆರ್.ಎ. ಸಂಖ್ಯೆ: **36/2025**

ಎರಡು ಪ್ರಕರಣಗಳಲ್ಲಿ ಮೇಲ್ಮನವಿದಾರ -

ಮಹೇಂದ್ರ ಎಸ್ ದಿವಾಕರ್
ಶಾಂತರಾಮ್ ಎನ್ ದಿವಾಕರ್
ವಯಸ್ಸು ಸುಮಾರು 50 ವರ್ಷ,
ವ್ಯವಸಾಯ,
ವಾಸ: ಮಹಗಣಪತಿ ಜ್ಯುವೆಲರ್ಸ್,
ಸೀತಾರಾಘವ ಬ್ಯಾಂಕ್ ಹತ್ತಿರ,
ಹೊಸದುರ್ಗ ಟೌನ್,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

Digitally signed by YAMANOORAPPA KANAKAPPA BENAL
YAMANOORAPPA KANAKAPPA BENAL
Date: 2026.06.04 17:44:11 +0530

**(**ಮೇಲ್ಮನವಿದಾರನ ಪರ ವಕೀಲರು **-** ಶ್ರೀ ಹೆಚ್ ಲಕ್ಷ್ಮಿನಾರಾಯಣ**)**

-:: ವಿರುದ್ಧ ::-

ಎರಡು ಪ್ರಕರಣಗಳಲ್ಲಿ ಎದುರುದಾರ:-

ಹೆಚ್.ಕೆ. ಶಿವಕುಮಾರ್,
ತಂದೆ ಕಲ್ಲಪ್ಪ,
ವಯಸ್ಸು ಸುಮಾರು 60 ವರ್ಷ,
ವ್ಯವಸಾಯ,

ವಾಸಃ ಕೊರಟಿಕೆರೆ ಗ್ರಾಮ,
ಕಸಬಾ ಹೋಬಳಿ,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.
**(**ಎದುರುದಾರನ ಪರ ವಕೀಲರು **-**ಶ್ರೀ ಎಸ್**.** ಮಂಜುನಾಥ**)**

| | |
|---|---|
| ಮೇಲ್ಮನವಿಗಳನ್ನು ದಾಖಲು ಮಾಡಿದ ದಿನಾಂಕಃ | 18-09-2025 |
| ಮೇಲ್ಮನವಿಗಳ ಸ್ವರೂಪ | ವಿಚಾರಣಾ ನ್ಯಾಯಾಲಯದ ಅಸಲು ದಾವಾ ಸಂ. 95/2020 ರ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಲು ಕೋರಿ ಸಲ್ಲಿಸಿದ ಮೇಲ್ಮನವಿ. |
| ತೀರ್ಪು ಘೋಷಣೆ ಮಾಡಿದ ದಿನಾಂಕಃ | 04-06-2026 |
| ಒಟ್ಟು ಕಾಲಾವಧಿ | - ವರ್ಷಗಳು ತಿಂಗಳು ದಿನಗಳು<br>00 -08- -16- |

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ**.**ಎಂ**.**ಎಫ್**.**ಸಿ**,** ಹೊಸದುರ್ಗ**.**

**-:: ತೀರ್ಪು ::-**

ಮೇಲ್ಮನವಿ ಸಂಖ್ಯೆಃ 35/2025 ಮತ್ತು 36/2025 ಇವುಗಳನ್ನು ಒಂದೇ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಸಲ್ಲಿಸಿದ್ದು, ಆದ ಕಾರಣ ಎರಡು ಪ್ರಕರಣಗಳಲ್ಲಿ ಮೇಲ್ಮನವಿದಾರ ಒಂದೇ ಆಗಿದ್ದು, ಅದೇ ರೀತಿ ಎದುರುದಾರ ಒಂದೇ ಆಗಿದ್ದು, ಸಾಕ್ಷವು ಒಂದೆಯಾಗಿದ್ದು, ಮೇಲ್ಮನವಿ ಸಂಖ್ಯೆಃ35/2025 ನ್ನು ಮುಖ್ಯ ಪ್ರಕರಣವಾಗಿ ಪರಿಗಣಿಸಿ, ಉಳಿದ ಪ್ರಕರಣವನ್ನು ಅದರಲ್ಲಿ ಒಟ್ಟುಗೂಡಿಸಿ, ಸಾಮಾನ್ಯ ತೀರ್ಪನ್ನು ನೀಡುವುದಕ್ಕಾಗಿ, ಮೇಲ್ಮನವಿದಾರನ ಪರ ವಕೀಲರು ಸಲ್ಲಿಸಿದ ಮೆಮೋದ ಮೇಲಿನ

ಆದೇಶದಂತೆ ಮೇಲ್ಮನವಿ ಸಂಖ್ಯೆ 35/2025 ನ್ನು ಮುಖ್ಯ ಪ್ರಕರಣವಾಗಿ ಪರಿಗಣಿಸಿ, ಉಳಿದ ಪ್ರಕರಣವನ್ನು ಅದರಲ್ಲಿ ಒಟ್ಟುಗೂಡಿಸಿ, ವಾದವನ್ನು ಕೇಳಿದ್ದು, ಈ ಸಾಮಾನ್ಯ ತೀರ್ಪನ್ನು ಮಾಡಲಾಗಿದೆ.

**2.** ಎರಡು ಪ್ರಕರಣಗಳಲ್ಲಿನ ಮೇಲ್ಮನವಿದಾರ ವಿಚಾರಣಾ ನ್ಯಾಯಾಲಯದಲ್ಲಿ ಪ್ರತಿವಾದಿ ಇದ್ದು, ಹೊಸದುರ್ಗ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯವು ಮೂಲ ದಾವೆ ಸಂಖ್ಯೆ 95/2020 ರಲ್ಲಿ ದಿನಾಂಕಃ04-09-2025 ರಂದು ನೀಡಿರುವಂತಹ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಿ, ಎದುರು ಕ್ಲೇಮಿನ ತನ್ನ ದಾವೆಯನ್ನು ಡಿಕ್ರಿಗೊಳಿಸಬೇಕೆಂದು ಕೋರಿರುತ್ತಾನೆ.

**3**. ಪಕ್ಷಗಾರರು ವಿಚಾರಣಾ-ನ್ಯಾಯಾಲಯದಲ್ಲಿ ಯಾವ ಶ್ರೇಯಾಂಕದಲ್ಲಿದ್ದರೋ, ಸ್ಪಷ್ಟತೆ ಮತ್ತು ಅನುಕೂಲಕ್ಕಾಗಿ ಅದೇ ರೀತಿ ಅವರನ್ನು ಉಲ್ಲೇಖಿಸಲಾಗುತ್ತದೆ.

**4.** ಈ ಪ್ರಕರಣದ **ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-**

ವಾದಿ ದಾವಾ ಆಸ್ತಿಗೆ ತನ್ನನ್ನು ಮಾಲಕನೆಂದು ಘೋಷಿಸಬೇಕೆಂದು ಹಾಗೂ ದಾವಾ ಆಸ್ತಿಯಲ್ಲಿ ತನ್ನ ಸ್ವಾಧೀನತೆಗೆ ಹಸ್ತಕ್ಷೇಪ ಮಾಡದಂತೆ, ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಭಂಧಕಾಜ್ಞೆಯನ್ನು ನೀಡಬೇಕೆಂದು ಕೋರಿ, ದಾವೆಯನ್ನು ಸಲ್ಲಿಸಿದ್ದನು. ಸದರಿ ದಾವೆಯಲ್ಲಿ ಪ್ರತಿವಾದಿ ಎದುರುಕ್ಲೇಮನ್ನು ಕೋರಿದ್ದನು. ದಾವೆಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ತಿಳಿಸಬಹುದಾಗಿದೆಃ-

ವಾದಿ ದಾವಾ ತಪಶೀಲಿನ ಆಸ್ತಿಯನ್ನು ತನ್ನ ಕುಟುಂಬದಲ್ಲಿ ಆದ ಪಾಲುವಿಭಾಗದ ಮೂಲಕ ಪಡೆದುಕೊಂಡಿದ್ದು, ಸದರಿ ಆಸ್ತಿಯು ಹೊಸದುರ್ಗ

ತಾಲ್ಲೂಕು, ಕಸಬಾ ಹೋಬಳಿ, ಕಂಗುವಳ್ಳಿ ಗ್ರಾಮದ ರಿ.ಸರ್ವೆ ನಂ-290/1 ರಲ್ಲಿ 3 ಎಕರೆ ಪೈಕಿ 2 ಎಕರೆ 10 ಗುಂಟೆ ಇರುತ್ತದೆ. ವಾದಿ ದಾವಾ ಆಸ್ತಿಯನ್ನು ಪಡೆದುಕೊಂಡ ನಂತರ ಇದುವರೆಗೆ ಯಾರದೇ ಅಡೆ-ತಡೆ ಇಲ್ಲದೆ ಶಾಂತಿಯುತವಾಗಿ ಸ್ವಾಧೀನಾನುಭವವನ್ನು ಹೊಂದಿರುತ್ತಾನೆ. ದಾವಾ ಆಸ್ತಿಯನ್ನು ವಾದಿ ಪಡೆದುಕೊಂಡ ನಂತರ ತನ್ನ ಹೆಸರಿಗೆ ಖಾತೆಯನ್ನು ಮಾಡಲು ಸಂಬಂಧಪಟ್ಟ ಕಂದಾಯ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿದ್ದು, ಈಗ ದಾವಾ ಆಸ್ತಿಯ ಖಾತೆ ವಾದಿಯ ಹೆಸರಿನಲ್ಲಿ ಇದ್ದು, ವಾದಿ ಕಂದಾಯವನ್ನು ಕಟ್ಟುತ್ತಾ ಬರುತ್ತಿದ್ದಾನೆ. ವಾದಿ ದಾವಾ ಆಸ್ತಿಯನ್ನು ನೀರಾವರಿ ಜಮೀನಾಗಿ ಮಾಡಿ ಅಲ್ಲಿ ಶ್ರೀಗಂದ ಮತ್ತು ತೆಂಗಿನ ಗಿಡಗಳನ್ನು ನೆಟ್ಟಿರುತ್ತಾನೆ. ವಾದಿ ದಾವಾ ಆಸ್ತಿಯ ಸುತ್ತಲೂ ಕಲ್ಲು ಕಂಬಗಳನ್ನು ನೆಟ್ಟು ಮುಳ್ಳಿನ ತಂತಿಗಳನ್ನು ಹಾಕಿಸಿರುತ್ತಾನೆ. ದಾವಾ ಆಸ್ತಿಯಲ್ಲಿ ಗ್ರಾಮ ಪಂಚಾಯ್ತಿ ರಸ್ತೆಯು ಹೋಗಿರುತ್ತದೆ. ಆದರೆ, ಅದು ನಕಾಶೆ ಕಂಡ ರಸ್ತೆ ಅಲ್ಲ. ಪ್ರತಿವಾದಿಯ ಆಸ್ತಿಯು ದಾವಾ ಆಸ್ತಿಯ ಉತ್ತರ ದಿಕ್ಕಿನಲ್ಲಿ ಇರುತ್ತದೆ. ನಕಾಶೆ ರಸ್ತೆಯು ಪ್ರತಿವಾದಿಯ ಜಮೀನಿನ ಮೂಲಕ ಹೋಗಿರುತ್ತದೆ. ಸದರಿ ನಕಾಶೆ ರಸ್ತೆಯು ಕೊರಟಿಗೆರೆ ಗ್ರಾಮದಿಂದ ಚೌಳಹಿರಿಯೂರು-ಕಂಗುವಳ್ಳಿ ಪಿ.ಡಬ್ಲ್ಯೂ.ಡಿ ರಸ್ತೆವರೆಗೆ ಇರುತ್ತದೆ. ಪಿ.ಡಬ್ಲ್ಯೂ.ಡಿ ರಸ್ತೆಯು ಪ್ರತಿವಾದಿಯ ಜಮೀನಿನ ಉತ್ತರ ದಿಕ್ಕಿನಲ್ಲಿ ಇದ್ದು, ಸದರಿ ಪಿ.ಡಬ್ಲ್ಯೂ.ಡಿ ರಸ್ತೆಯು ಚೌಳಹಿರಿಯೂರಿನಿಂದ ಕಂಗುವಳ್ಳಿವರೆಗೆ ಇರುತ್ತದೆ. ಅಕ್ಕ-ಪಕ್ಕದ ಜಮೀನಿನ ಮಾಲಕರು ತಮ್ಮ ಜಮೀನುಗಳಿಗೆ ನಕಾಶೆ ದಾರಿಯ ಮೂಲಕ ಹೋಗುತ್ತಾರೆ. ಪ್ರತಿವಾದಿಯು ಬಲಶಾಲಿಯಾದ ವ್ಯಕ್ತಿಯಾಗಿದ್ದು, ಅವನು ದಾವಾ ಆಸ್ತಿಯಲ್ಲಿ ಉತ್ತರದ ಕಡೆ ಗ್ರಾಮ ಪಂಚಾಯ್ತಿ ರಸ್ತೆಯಿಂದ ತನ್ನ ಜಮೀನಿಗೆ ಹೋಗಲು ರಸ್ತೆಯನ್ನು ನಿರ್ಮಾಣ ಮಾಡಲು ಪ್ರಯತ್ನ ಮಾಡುತ್ತಿದ್ದಾನೆ. ಪ್ರತಿವಾದಿಯು ದಾವಾ ಆಸ್ತಿಯಲ್ಲಿ ರಸ್ತೆಯನ್ನು ನಿರ್ಮಿಸಲು ಕಲ್ಲುಗಳನ್ನು ಹಾಕಲು ಪ್ರಯತ್ನಿಸಿರುತ್ತಾನೆ. ಪ್ರತಿವಾದಿಯು ಬಲಶಾಲಿ ಹಾಗೂ ಪ್ರಭಾವಶಾಲಿಯಾದ ವ್ಯಕ್ತಿಯಾಗಿದ್ದು, ವಾದಿ ಬಡವ ಮತ್ತು

ಅಸಹಾಯಕನಾಗಿದ್ದು, ಪ್ರತಿವಾದಿಯು ಜೆಸಿಬಿಯೊಂದಿಗೆ ದಾವಾ ಆಸ್ತಿಯ ಹತ್ತಿರ ಬಂದು, ದಾವಾ ಆಸ್ತಿಯಲ್ಲಿ ರಸ್ತೆಯನ್ನು ನಿರ್ಮಾಣ ಮಾಡಲು ಪ್ರಯತ್ನಿಸಿರುತ್ತಾನೆ. ವಾದಿ ಆ ರೀತಿ ಮಾಡಬಾರದೆಂದು ಪ್ರತಿವಾದಿಯನ್ನು ಕೇಳಿಕೊಂಡಿದ್ದು, ಆದರೆ ದಾವಾ ಆಸ್ತಿಯಲ್ಲಿ ವಾದಿಯ ಮಾಲಿಕತ್ವವನ್ನು ಅಲ್ಲಗಳೆದಿರುತ್ತಾನೆ ಮತ್ತು ತನ್ನ ಜಮೀನಿಗೆ ದಾವಾ ಆಸ್ತಿಯ ಮೂಲಕ ಹೋಗಲು ರಸ್ತೆಯನ್ನು ಮಾಡುವುದಾಗಿ ಹೇಳಿರುತ್ತಾನೆ. ಆ ರೀತಿ ಮಾಡಲು ಪ್ರತಿವಾದಿಗೆ ಯಾವುದೇ ರೀತಿ ಹಕ್ಕು ಇರುವುದಿಲ್ಲ. ಅಲ್ಲದೆ, ಗ್ರಾಮದ ಹಿರಿಯರು ಬುದ್ಧಿವಾದ ಹೇಳಿದರೂ ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ. 2020 ಪೆಬ್ರುವರಿ ಕೊನೆಯ ವಾರ ಪ್ರತಿವಾದಿ ದಾವಾ ಆಸ್ತಿಯಲ್ಲಿ ವಾದಿಯ ಮಾಲಿಕತ್ವವನ್ನು ಅಲ್ಲಗಳೆದು, ವಾದಿಯ ಸ್ವಾಧೀನಾನುಭವಕ್ಕೆ ಅಡೆ-ತಡೆ ಮಾಡಲು ಪ್ರಯತ್ನಿಸಿದಾಗ ದಾವರ ಕಾರಣ ಉಂಟಾಗಿರುತ್ತದೆ. ಆದ್ದರಿಂದ, ದಾವೆಯಲ್ಲಿ ಕೇಳಿದಂತೆ ತನ್ನ ಪರ ಡಿಕ್ರಿ ಮಾಡಬೇಕೆಂದು ವಾದಿ ಪ್ರಾರ್ಥಿಸಿಕೊಂಡಿರುತ್ತಾನೆ.

**5.** ಸದರಿ ದಾವೆಯಲ್ಲಿ, ಪ್ರತಿವಾದಿಗೆ ದಾವೆಯ ಸಮನ್ಸ್ ಕಳುಹಿಸಲಾಗಿ ಪ್ರತಿವಾದಿ ತನ್ನ ವಕೀಲರ ಮೂಲಕ ಹಾಜರಾಗಿ ತನ್ನ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಎದುರುಕ್ಲೇಮನ್ನು ಕೇಳಿರುತ್ತಾನೆ.

**6.** ಪ್ರತಿವಾದಿ ತನ್ನ ಲಿಖಿತ ಹೇಳಿಕೆ ಎದುರುಕ್ಲೇಮಿನಲ್ಲಿ ದಾವಾ ಸರ್ವೇ ನಂ-290 ರಲ್ಲಿ ಸುಮಾರು 6 ಎಕರೆ ಜಮೀನು ಇದ್ದು, ಅದರಲ್ಲಿ ದಕ್ಷಿಣದ ಅರ್ಧ ಆಸ್ತಿಯನ್ನು ವಾದಿ ಮತ್ತು ಇತರರು ಅನುಭವಿಸುತ್ತಿದ್ದಾರೆ. ಉಳಿದ ಉತ್ತರ ಭಾಗದ ಅರ್ಧ ಜಮೀನು ಸುಮಾರು 3 ಎಕರೆಯನ್ನು ದಿನಾಂಕಃ 25-04-1996 ಮತ್ತು 06-05-1996 ರಂದು ನೊಂದಾಯಿತ ಕ್ರಯಪತ್ರದ ಮೂಲಕ ಪಡೆದುಕೊಂಡಿರುತ್ತದೆ. ಸದರಿ ಜಮೀನುಗಳನ್ನು ಕ್ರಯಕ್ಕೆ ತೆಗೆದುಕೊಂಡ ದಿನದಿಂದ ಪ್ರತಿವಾದಿಯು ಸದರಿ ಆಸ್ತಿಗಳ ಸ್ವಾಧೀನಾನುಭವನ್ನು ಹೊಂದಿರುತ್ತಾನೆ. ಸುಮಾರು 120 ತೆಂಗಿನ ಗಿಡಗಳನ್ನು ಮತ್ತು

10 ಮಾವಿನ ಗಿಡಗಳನ್ನು ಬೆಳೆಸಿದ್ದು, 3 ಬೋರ್‌ವೆಲ್ ಗಳನ್ನು ಹಾಕಿಸಿ, ಫಾರಂ ಹೌಸನ್ನು ಕಟ್ಟಿದ್ದು ಮತ್ತು ಅವನ ಆಸ್ತಿಯ ಸುತ್ತಲೂ ಕಲ್ಲಿನ ಕಂಬಗಳನ್ನು ನೆಟ್ಟು, ಐಬಿಎಕ್ಸ್ ವಯರ್ನಿಂದ ಕಟ್ಟಿರುತ್ತಾನೆ. ಸದರಿ 3 ಎಕರೆ ಜಮೀನಿನ ಖಾತೆಯು ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ಹದ್ದುಬಸ್ತು ಆದ ನಂತರ ಕಂಗುವಳ್ಳಿ ಗ್ರಾಮದ ಸರ್ವೇ ನಂ-290 ವಿಸ್ತೀರ್ಣ 1 ಎಕರೆಗೆ 290/2 ಮತ್ತು 2 ಎಕರೆಗೆ 290/3 ಎಂದು ಬದಲಾವಣೆಯಾಗಿರುತ್ತವೆ. ವಾದಿಯ ಜಮೀನಿನ ಮಧ್ಯ ಭಾಗದಲ್ಲಿ ಪಿ.ಡಬ್ಲೂ.ಡಿ ರಸ್ತೆ ಇರುತ್ತದೆ, ಅದು ಕೊರಟಿಗೆರೆ ಗೇಟಿನಿಂದ ಕೊರಟಿಗೆರೆ ಗ್ರಾಮದವರೆಗೆ ಇರುತ್ತದೆ. ಸದರಿ ಪಿ.ಡಬ್ಲೂ.ಡಿ ರಸ್ತೆಯ ಉತ್ತರಕ್ಕೆ ಸುಮಾರು 20 ಗುಂಟೆ ಜಮೀನನ್ನು ವಾದಿ ಅನುಭವಿಸುತ್ತಿದ್ದಾನೆ, ಅದರಲ್ಲಿ ಶ್ರೀಗಂದ, ನುಗ್ಗೆಗಿಡ ಮತ್ತು ಹೆಬ್ಬೇವು ಗಿಡಗಳನ್ನು ಹಾಕಿದ್ದು ಮತ್ತು ಬೆರ್ವೆಲನ್ನು ಹಾಕಿಸಿಲ್ಲ, ನೀರಾವರಿ ಜಮೀನು ಇರುವುದಿಲ್ಲ ಮತ್ತು ಕಲ್ಲಿನ ಕಂಬಗಳನ್ನು ಹಾಕಿಲ್ಲ. ಸದರಿ ಪಿ.ಡಬ್ಲೂ.ಡಿ ರಸ್ತೆಯ ದಕ್ಷಿಣಕ್ಕೆ ಇರುವ ಉಳಿದ ಜಮೀನಿನಲ್ಲಿ ವಾದಿ ಮತ್ತು ಇತರೆ ಸದಸ್ಯರು ಸಾಧೀನತೆಯಲ್ಲಿ ಇರುತ್ತಾರೆ. ವಾದಿಯು ಪಕ್ಕದ ಜಮೀನಿನ ಮಾಲಕರಿಂದ ನೀರನ್ನು ತೆಗೆದುಕೊಂಡಿದ್ದು, ಮತ್ತು ಪಕ್ಕದ ಜಮೀನಿನ ಮಾಲಕರುಗಳು ಕಲ್ಲುಕಂಬಗಳನ್ನು ಹಾಕಿ ತಮ್ಮ ಜಮೀನಿಗೆ ಸುತ್ತಲು ತಂತಿಗಳನ್ನು ಹಾಕಿರುತ್ತಾರೆ. ಸರ್ವೇ ನಂ-112 ರಲ್ಲಿ ಸುಮಾರು 5 ಎಕರೆ 14 ಗುಂಟೆ ಸರ್ಕಾರದ ಜಮೀನು ಇದ್ದು, ಅದರಲ್ಲಿ 7 ಗುಂಟೆಯು ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಇರುತ್ತದೆ. ಸದರಿ ಜಮೀನು ಕಂಗುವಳ್ಳಿ ಗ್ರಾಮದ ಜಮೀನು ಸರ್ವೇ ನಂ 291 ರಲ್ಲಿ ಕೂಡಿಕೊಂಡಿದ್ದು, ಅದನ್ನು ವಾದಿ ಮತ್ತು ಪ್ರತಿವಾದಿ ಹಾಗೂ ಅಕ್ಕ-ಪಕ್ಕದ ಜಮೀನಿನ ಮಾಲಕರು ಎತ್ತಿನ ಬಂಡಿಯನ್ನು ತೆಗೆದುಕೊಂಡು ಹೋಗಿ ಬರಲು ಮತ್ತು ವ್ಯವಸಾಯದ ಉಪಕರಣಗಳನ್ನು ಸಾಗಿಸಲು ಉಪಯೋಗಿಸುತ್ತಿದ್ದಾರೆ. ಸದರಿ ಬಂಡಿ ದಾರಿಯು ಪಿ.ಡಬ್ಲೂ.ಡಿ ರಸ್ತೆಯಿಂದ ದಕ್ಷಿಣದಿಂದ-ಉತ್ತರಕ್ಕೆ ಹೋಗುತ್ತಿರುವುದು ವಾದಿಯ ತಿಳುವಳಿಕೆಗೆ ಇರುತ್ತದೆ. ಅದು ವಾದಿಯ ಜಮೀನಿನ ಪೂರ್ವದ ಅಂಚಿನ ಮೂಲಕ ಹಾದು

ಹೋಗುತ್ತಿದ್ದು, ಅದನ್ನು ಲಿಖಿತ ಹೇಳಿಕೆಯೊಂದಿಗೆ ಸಲ್ಲಿಸಿದ ಕಚ್ಚಾ ನಕಾಶೆಯಲ್ಲಿ ಎ.ಬಿ.ಸಿ.ಡಿ ಎಂದು ತೋರಿಸಿರುತ್ತದೆ. ಸದರಿ ಬಂಡಿ ದಾರಿಯು ಸುಮಾರು 20 ಅಡಿ ಅಗಲವಿದ್ದು, ಅದನ್ನು ಹೋಗಿ ಬರುವ ಸಲುವಾಗಿ ರಸ್ತೆಯ ಕಾಯ್ದಿರಿಸಲಾಗಿದೆ. ಅದು ಸರ್ಕಾರದ ಜಮೀನು ಸರ್ವೇ ನಂ-112 ರಲ್ಲಿ ಅನಾಧಿಕಾಲದಿಂದಲೂ ಇದ್ದು, ಅದು ಕಂಗುವಳ್ಳಿ ಗ್ರಾಮದ ಜಮೀನು ಸರ್ವೆ ನಂ-291 ರಲ್ಲಿ ಕೂಡಿಕೊಂಡಿರುತ್ತದೆ. ಕಚ್ಚಾ ನಕಾಶೆಯಲ್ಲಿ ಎ.ಬಿ.ಸಿ.ಡಿ ಎಂದು ತೋರಿಸಿರುವ ಬಂಡಿದಾರಿಯು ವಾದಿಯ ಜಮೀನಿನ ಪೂರ್ವ ದಿಕ್ಕಿನ ಮೂಲಕ ಹೋಗುತ್ತಿದ್ದು, ಅದನ್ನು ವಾದಿ ಮತ್ತು ಪ್ರತಿವಾದಿ ಸುಮಾರು 24 ವರ್ಷಗಳಿಗಿಂತಲೂ ಮೇಲ್ಪಟ್ಟು ತಮ್ಮ ಜಮೀನುಗಳಿಗೆ ಹೋಗಲು ಉಪಯೋಗಿಸುತ್ತಿದ್ದಾರೆ. ವಾದಿ ಬಂಡಿ ದಾರಿಯನ್ನು ಒತ್ತುವರಿ ಮಾಡಲು ಅವಕಾಶವನ್ನು ಬಳಸಿ, ಇತ್ತೀಚೇಗೆ ಜೆಸಿಬಿ ಮೂಲಕ ಅಗೆದು ಗ್ರಾಮದ ರಾಜಕೀಯ ವ್ಯಕ್ತಿಗಳ ಪ್ರಚೋದನೆಯ ಮೇರೆಗೆ ಪ್ರತಿವಾದಿ ತನ್ನ ಜಮೀನಿಗೆ ಬಂಡಿ ದಾರಿ ಮೂಲಕ ವ್ಯವಸಾಯದ ವಸ್ತುಗಳನ್ನು ಸಾಗಿಸಲು ಅಡೆ-ತಡೆ ಮಾಡಲು ಪ್ರಯತ್ನಿಸಿರುತ್ತಾನೆ. ಆದ್ದರಿಂದ, ಪ್ರತಿವಾದಿಯು ದಿನಾಂಕಃ 21-09-2019 ರಂದು ಹೊಸದುರ್ಗ ತಹಶೀಲ್ದಾರರ ಮುಂದೆ ಪಿರ್ಯಾದಿಯನ್ನು ಕೊಟ್ಟಿರುತ್ತಾನೆ. ನಂತರ ಹೊಸದುರ್ಗ ತಹಶೀಲ್ದಾರರು ಸದರಿ ಜಮೀನಿಗೆ ಭೇಟಿ ನೀಡಿ ತಾಲ್ಲೂಕು ಸರ್ವೆಯವರಿಗೆ ಸದರಿ ಜಮೀನುಗಳನ್ನು ಹಾಗು ಬಂಡಿ ದಾರಿಯನ್ನು ಅಳೆದು, ವರದಿಯನ್ನು ಸಲ್ಲಿಸಲು ಆದೇಶವನ್ನು ಮಾಡಿರುತ್ತಾರೆ. ಇಂತಹ ಸಂದರ್ಭದಲ್ಲಿ ವಾದಿ ಸುಳ್ಳು ದಾವೆಯನ್ನು ಪ್ರತಿವಾದಿಯ ವಿರುದ್ಧ ಸಲ್ಲಿಸಿ, ಪ್ರತಿವಾದಿ ಎ.ಬಿ.ಸಿ.ಡಿ ರಸ್ತೆಯ ಮೂಲಕ ಹೋಗಿ ಬರಲು ಅಡೆ-ತಡೆ ಮಾಡಲು ಪ್ರಯತ್ನಿಸಿರುತ್ತಾನೆ. ವಾದಿಯು ಪ್ರಭಾವ ಶಾಲಿಯಾದ ಮತ್ತು ಆರ್ಥಿಕವಾಗಿ ಬಲಾಢ್ಯನಾದ ವ್ಯಕ್ತಿಯಾಗಿದ್ದು, ಅವನು ಪ್ರತಿವಾದಿ ಎ.ಬಿ.ಸಿ.ಡಿ ರಸ್ತೆಯ ಮೂಲಕ ಹೋಗಿ ಬರದಂತೆ ತಡೆಯುತ್ತಿದ್ದಾನೆ. ಪ್ರತಿವಾದಿಗೆ ತನ್ನ ಜಮೀನುಗಳಿಗೆ ಹೋಗಲು ಕಚ್ಚಾ ನಕಾಶೆಯಲ್ಲಿ ತೋರಿಸಿದ ಎ.ಬಿ.ಸಿ.ಡಿ ರಸ್ತೆಯನ್ನು

ಹೊರತುಪಡಿಸಿ ಬೇರೆ ಯಾವುದೇ ರಸ್ತೆ ಇರುವುದಿಲ್ಲ. ಆದ್ದರಿಂದ, ಪ್ರತಿವಾದಿಯು ಎದುರು ಕ್ಲೇಮನ್ನು ಕೇಳದೆ ಬೇರೆ ದಾರಿ ಇರುವುದಿಲ್ಲ. 2019 ಸೆಪ್ಟಂಬರ್ 3 ನೇ ವಾರ ವಾದಿ ಅನಾವಶ್ಯಕವಾಗಿ ಎ.ಬಿ.ಸಿ.ಡಿ ರಸ್ತೆಯಲ್ಲಿ ಪ್ರತಿವಾದಿ ಹೋಗಿ ಬರಲು ಅಡೆ-ತಡೆ ಮಾಡಲು ಪ್ರಯತ್ನಿಸಿದಾಗ ಎದುರುಕ್ಲೇಮಿಗೆ ದಾವಾ ಕಾರಣ ಉಂಟಾಗಿರುತ್ತದೆ. ಆದ್ದರಿಂದ, ಎದುರುಕ್ಲೇಮಿನಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕು ಎಂದು ಪ್ರತಿವಾದಿ ಪ್ರಾರ್ಥಿಸಿಕೊಂಡಿರುತ್ತಾನೆ.

**7.** ವಿಚಾರಣಾ-ನ್ಯಾಯಾಲಯವು ವಾದ ಪತ್ರ, ಲಿಖಿತ ಹೇಳಿಕೆ ಹಾಗೂ ದಾಖಲೆಗಳನ್ನು ಅವಲೋಕಿಸಿ, ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿರುತ್ತದೆ.

1. Whether the plaintiff proves that he is the absolute owner in possession of the suit schedule property?

2. Whether the plaintiff proves the alleged interference caused by the defendant?

3. Whether the defendant proves that there is a road existing in land Sy.No.291 of Kanguvally village towards the eastern side of the land of the plaintiff to reach his land?

4. Whether the defendant proves obstruction caused by the plaintiff for usage of road described in the schedule to the written statement?

5. Whether the plaintiff is entitled to the relief of declaration and permanent injunction?

6. Whether the defendants is entitled to the relief of declaration and permanent injunction?

7. What decree or order?

**8**. ವಾದಪತ್ರದಲ್ಲಿ ಆರೋಪಿಸಿರುವ ಅಂಶಗಳನ್ನು ಸಾಭೀತುಪಡಿಸಲು, ವಾದಿ ತಾನು ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, ಒಬ್ಬ ಸಾಕ್ಷಿದಾರನನ್ನು ಪಿ.ಡಬ್ಲೂ-2 ಎಂದು ವಿಚಾರಣೆಗೆ ಒಳಪಡಿಸಿಕೊಂಡು, 6 ದಾಖಲೆಗಳನ್ನು ನಿಪಿ.1 ರಿಂದ 6 ಎಂದು ಗುರುತಿಸಿಕೊಂಡು, ತನ್ನ ಪರ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾನೆ.

**9**. ಲಿಖಿತ ಹೇಳಿಕೆಯಲ್ಲಿ ಆರೋಪಿಸಿರುವ ಅಂಶಗಳನ್ನು ಸಾಬೀತುಪಡಿಸಲು ಪ್ರತಿವಾದಿಯು ತಾನು ಡಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, 23 ದಾಖಲೆಗಳನ್ನು ನಿಡಿ.1 ರಿಂದ 23 ಎಂದು ಗುರುತಿಸಿಕೊಂಡು ತನ್ನ ಪರ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾನೆ.

**10**. ವಿಚಾರಣಾ-ನ್ಯಾಯಾಲಯವು ಮೇಲಿನ ವಿವಾದಾಂಶಗಳಿಗೆ ದಾವೆಯನ್ನು ವಿಚಾರಣೆ ಮಾಡಿದ ನಂತರ, ವಾದಿಯ ಪರ ಉತ್ತರಿಸಿ, ವಾದಿಯ ದಾವೆಯನ್ನು ಡಿಕ್ರಿಗೊಳಿಸಿ, ಪ್ರತಿವಾದಿಯ ಎದುರು ಕ್ಲೇಮನ್ನು ವಜಾಗೊಳಿಸಿರುತ್ತದೆ. ಸದರಿ ತೀರ್ಪು ಮತ್ತು ಡಿಕ್ರಿಯಿಂದ ನೊಂದುಕೊಂಡ ಪ್ರತಿವಾದಿ ಈ ಮೇಲ್ಮನವಿಗಳನ್ನು ಸಲ್ಲಿಸಿಕೊಂಡು ಬಂದಿರುತ್ತಾನೆ.

**11**. ಮೇಲ್ಮನವಿ ಸಂಖ್ಯೆ-35/2025 ರಲ್ಲಿ ಮೇಲ್ಮನವಿದಾರ/ಪ್ರತಿವಾದಿ ಹೇಳಿಕೊಂಡಿರುವ ಸಂಗತಿಗಳ ಸಾರಾಂಶ ಈ ಕೆಳಗಿನಂತಿದೆ.

1. ವಿಚಾರಣಾ-ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯು ವಸ್ತುಸ್ಥಿತಿ ಮತ್ತು ಕಾನೂನು ಅಡಿಯಲ್ಲಿ ನಿಲ್ಲುವಂತಹದಲ್ಲ.

2. ವಿಚಾರಣಾ-ನ್ಯಾಯಾಲಯವು 1 ಮತ್ತು 5 ನೇ ವಿವಾದಾಂಶಗಳನ್ನು ಸಕಾರಾತ್ಮಕವಾಗಿ ಹಾಗೂ ವಿವಾದಾಂಶ-3, 4 ಮತ್ತು 6 ನ್ನು ನಕಾರಾತ್ಮಕವಾಗಿ ಉತ್ತರಿ ಕಾನೂನು ಮತ್ತು ವಸ್ತುಸ್ಥಿತಿಯ ಮೇಲೆ ತಪ್ಪನ್ನು ಎಸಗಿರುತ್ತದೆ.

3. ವಿಚಾರಣಾ ನ್ಯಾಯಾಲಯವು ಕಾರಣಗಳನ್ನು ನೀಡದೆ ಪ್ರತಿವಾದಿಯ ಎದುರುಕ್ಲೇಮಿನ ದಾವೆಯನ್ನು ವಜಾಗೊಳಿಸಿ ತಪ್ಪನ್ನು ಎಸಗಿರುತ್ತದೆ.

4. ಪ್ರತಿವಾದಿ ಮತ್ತು ವಾದಿಯು ಹೋಗಿ ಬರಲು ರಸ್ತೆಯನ್ನು ಉಪಯೋಗಿಸುತ್ತಿದ್ದು, ಕಾನೂನಿನಲ್ಲಿ ಹೇಳಿದ ಅವಧಿಗಿಂತಲೂ ಹೆಚ್ಚಿನ ಅವಧಿಯಿಂದಲೂ ಉಪಯೋಗಿಸುತ್ತಿದ್ದು, ಸದರಿ ರಸ್ತೆಯು ದಕ್ಷಿಣದಿಂದ ಉತ್ತರಕ್ಕೆ ಇದ್ದು, ಅವರ ಜಮೀನುಗಳಿಗೆ ಹೋಗುತ್ತಾರೆ.

5. ಮೇಲ್ಮನವಿದಾರ/ ಎದುರುದಾರ ಸದರಿ ರಸ್ತೆಯನ್ನು ಉಪಯೋಗಿಸುತ್ತಿದ್ದು, ಅದು ವಾದಿಯ ಜಮೀನಿನ ಪೂರ್ವದ ಕಡೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ ಇದ್ದು, ಯಾರದೇ ಅಡೆ-ತಡೆ ಇಲ್ಲದೆ ಸುಮಾರು 20 ವರ್ಷಗಳಿಗಿಂತಲೂ ಅಧಿಕವಾಗಿ ಅನುಭೋಗದ ಹಕ್ಕಿನ ಮೂಲಕ ಉಪಯೋಗಿಸುತ್ತಿದ್ದಾನೆ.

6. ಸರ್ಕಾರದ ಜಮೀನು ಸರ್ವೆ ನಂ-112 ರಲ್ಲಿ 7 ಗುಂಟೆಯು ಇದ್ದು, ಅದು ಸರ್ವೆ ನಂ-291 ರ ಜೊತೆ ಸೇರಿಕೊಂಡಿದ್ದು, ಸದರಿ ಸರ್ವೆ ನಂ-291 ಒಬ್ಬ ಪರಮೇಶ್ವರಪ್ಪನಿಗೆ ಸಂಬಂಧಪಟ್ಟದ್ದಾಗಿದ್ದು, ಅದು ವಾದಿಯ ಜಮೀನಿನ ಪೂರ್ವದ ಭಾಗದಲ್ಲಿ ಇದ್ದು, ಸದರಿ ಪರಮೇಶ್ವರಪ್ಪನ ಸರ್ಕಾರದ ಜಮೀನನ್ನು ಬಿಟ್ಟು ತನ್ನ ಜಮೀನಿಗೆ ಪಶ್ಚಿಮ ಭಾಗದಲ್ಲಿ ತಂತಿ ಬೇಲಿಯನ್ನು ಹಾಕಿರುತ್ತಾನೆ.

7. ಪ್ರತಿವಾದಿಯು ಉಪಯೋಗಿಸುತ್ತಿರುವ ರಸ್ತೆ ವಾದಿಗೆ ಸಂಬಂಧಪಟ್ಟದ್ದಲ್ಲ, ಆದರೆ ಸರ್ಕಾರದ ಜಮೀನು ಸರ್ವೆ ನಂ-112 ರಲ್ಲಿನ 7 ಗುಂಟೆಯು ಕಂಗುವಳ್ಳಿ ಗ್ರಾಮದ ಸರ್ವೆ ನಂ-291 ರೊಂದಿಗೆ ಸೇರಿಕೊಂಡಿದ್ದು ಮತ್ತು ವಾದಿಯು ಸಹ ಅನಾಧಿಕಾಲದಿಂದಲೂ ಸದರಿ ರಸ್ತೆಯನ್ನು ಉಪಯೋಗಿಸುತ್ತಿದ್ದಾನೆ.

8. ಮೇಲ್ಮನವಿದಾರ/ಪ್ರತಿವಾದಿಯು ಸರ್ಕಾರದ ಜಮೀನು ಸರ್ವೇ ನಂ-112 ಮತ್ತು ವಾದಿ ಮತ್ತು ಪ್ರತಿವಾದಿಯ ಜಮೀನುಗಳನ್ನು ಅಳತೆ ಮಾಡಿ ವರದಿಯನ್ನು ಸಲ್ಲಿಸಲು ನ್ಯಾಯಾಲಯದ ಆಯುಕ್ತರನ್ನು ನೇಮಿಸಬೇಕು ಎಂದು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯನ್ನು ವಿಚಾರಣಾ ನ್ಯಾಯಾಲಯವು ವಜಾಗೊಳಿಸಿರುತ್ತದೆ. ಸದರಿ ಅರ್ಜಿಯನ್ನು ಪುರಸ್ಕರಿಸುವುದು ಬಹಳ ಅವಶ್ಯವಾಗಿರುತ್ತದೆ.

9. ಪ್ರತಿವಾದಿಯು ದಕ್ಷಿಣದಿಂದ ಉತ್ತರಕ್ಕೆ ಇರುವ ರಸ್ತೆಗೆ ಸಂಬಂಧಿಸಿದಂತೆ ಹಾಜರುಪಡಿಸಿರುವಂತಹ ದಾಖಲೆಗಳನ್ನು ವಿಚಾರಣಾ ನ್ಯಾಯಾಲಯವು ಪರಗಣಿಸದೆ ತಪ್ಪನ್ನು ಎಸಗಿರುತ್ತದೆ.

10. ಮೇಲ್ಮನವಿದಾರ/ ಪ್ರತಿವಾದಿ ರಸ್ತೆಯನ್ನು ಉಪಯೋಗಿಸುವುದಕ್ಕೆ ಅಡ್ಡಿಪಡಿಸದಂತೆ ವಿಚಾರಣಾ ನ್ಯಾಯಾಲಯವು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಮಾಡಿದಂತಹ ಆದೇಶವನ್ನು ಪರಿಗಣಿಸದೆ ಇರುವುದು ತಪ್ಪು.

11. ಎದುರುದಾರ/ ವಾದಿಯು ಪಾಲುವಿಭಾಗ ಪತ್ರ, ಹದ್ದುಬಸ್ತು ನಕಲು, ಸರ್ವೆ ಸ್ಕೆಚ್ ಮತ್ತು ಇತರ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಆದ್ದರಿಂದ, ವಾದಿಯ ಘೋಷಣೆಯ ದಾವೆಯು ಕಾನೂನಿನಡಿಯಲ್ಲಿ ನಿಲ್ಲುವಂತಹದಲ್ಲ.

12. ವಿಚಾರಣಾ ನ್ಯಾಯಾಲಯವು ವಾದಿ ಹಾಜರುಪಡಿಸಿದಂತಹ ದಾಖಲೆಗಳು ಹಾಗೂ ಸಂಬಂಧಿತ ಪ್ರಮುಖ ಅಂಶಗಳನ್ನು ಚರ್ಚಿಸುವಲ್ಲಿ ವಿಫಲವಾಗಿದ್ದು, ವಾದಿಯ ಪರವಾಗಿ ಹೆಚ್ಚಿನ ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತದೆ.

13. ವಿಚಾರಣಾ ನ್ಯಾಯಾಲಯವು ವಾದಿಯ ದಾಖಲಾತಿ ಸಾಕ್ಷಿ ಅದರಂತೆ ಮೌಖಿಕ ಸಾಕ್ಷಿಯನ್ನು ಗಮನಿಸದೆ ತಪ್ಪನ್ನು ಎಸಗಿದೆ.

14. ವಿಚಾರಣಾ ನ್ಯಾಯಾಲಯವು ಪ್ರತಿವಾದಿ ಹಾಜರುಪಡಿಸಿದ ದಾಖಲೆಗಳು ಮತ್ತು ಅದರಂತೆ ಸಾಕ್ಷಿಯನ್ನು ಗಮನಿಸದೆ ತಪ್ಪನ್ನು ಎಸಗಿದೆ.

15. ವಿಚಾರಣಾ ನ್ಯಾಯಾಲಯವು ನೀಡಿರುವ ತೀರ್ಪು ಮತ್ತು ಡಿಕ್ರಿಯು

ಕಾನೂನಿಗೆ ವಿರುದ್ಧವಾಗಿರುವುದರಿಂದ, ನ್ಯಾಯದ ಕಗ್ಗೊಲೆಯನ್ನು ತಪ್ಪಿಸುವ ಸಲುವಾಗಿ ತೀರ್ಪು ಮತ್ತು ಡಿಕ್ರಿಯು ರದ್ದುಪಡಿಸುವಂತಹದು.

16. ವ್ಯವಸಾಯ ಸಾಮಾಗ್ರಿಗಳನ್ನು ತೆಗೆದುಕೊಂಡು ಹೋಗಿ ಬರಲು ಪ್ರತಿವಾದಿಗೆ ಪರ್ಯಾಯ ರಸ್ತೆ ಇರುವುದಿಲ್ಲ.

17. ವಿಚಾರಣಾ ನ್ಯಾಯಾಲಯವು ಘೋಷಣೆಗೆ ಸಂಬಂಧಿಸಿದಂತೆ ನೀಡಿದ ತೀರ್ಪು ಮತ್ತು ಡಿಕ್ರಿಯು ಸೂಕ್ತ ದಾಖಲೆಗಳನ್ನು ಹಾಜರುಪಡಿಸದ ಕಾರಣದಿಂದಾಗಿ ನಿಲ್ಲುವಂತಹದಲ್ಲ.

ಆದ್ದರಿಂದ ಹೊಸದುರ್ಗದ ಪ್ರಧಾನ ಸಿವಿಲ್ ನ್ಯಾಯಾಧೀಶರು ಮೂಲ ದಾವೆ ನಂ.95/2020 ರಲ್ಲಿ ದಾರಿಯ ಅನುಭೋಗದ ಹಕ್ಕಿಗೆ ಸಂಬಂಧಿಸಿದಂತೆ ಎದುರುಕೇಳಿಮಿನ ದಾವೆಗೆ ಸಂಬಂಧಿಸಿದಂತೆ ದಿನಾಂಕಃ04-09-2025 ರಂದು ನೀಡಿರುವಂತಹ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಬೇಕೆಂದು ಮೇಲ್ಮನವಿದಾರನು ಪ್ರಾರ್ಥಿಸಿಕೊಂಡಿರುತ್ತಾನೆ.

**12**. ಮೇಲ್ಮನವಿ ಸಂಖ್ಯೆ-36/2025 ರಲ್ಲಿ ಮೇಲ್ಮನವಿದಾರ/ಪ್ರತಿವಾದಿ ಹೇಳಿಕೊಂಡಿರುವ ಸಂಗತಿಗಳ ಸಾರಾಂಶ ಈ ಕೆಳಗಿನಂತಿದೆ.

1. ವಿಚಾರಣಾ-ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯು ವಸ್ತುಸ್ಥಿತಿ ಮತ್ತು ಕಾನೂನು ಅಡಿಯಲ್ಲಿ ನಿಲ್ಲುವಂತಹದಲ್ಲ.

2. ವಿಚಾರಣಾ-ನ್ಯಾಯಾಲಯವು 2 ಮತ್ತು 5 ನೇ ವಿವಾದಾಂಶಗಳನ್ನು ಸಕಾರಾತ್ಮಕವಾಗಿ ಹಾಗೂ ವಿವಾದಾಂಶ-3, 4 ಮತ್ತು 6 ನ್ನು ನಕಾರಾತ್ಮಕವಾಗಿ ಉತ್ತರಿ ಕಾನೂನು ಮತ್ತು ವಸ್ತುಸ್ಥಿತಿಯ ಮೇಲೆ ತಪ್ಪನ್ನು ಎಸಗಿರುತ್ತದೆ.

3. ವಿಚಾರಣಾ ನ್ಯಾಯಾಲಯವು ಕಾರಣಗಳನ್ನು ನೀಡದೆ ವಾದಿಯ ದಾವೆಯನ್ನು ವಜಾಗೊಳಿಸಿ ತಪ್ಪನ್ನು ಎಸಗಿರುತ್ತದೆ.

4. ವಾದಿಯು ಘೋಷಣೆಯ ದಾಖಲೆಗಳು / ಮಾಲಿಕತ್ವದ ದಾಖಲೆಗಳನ್ನು ಹಾಜರುಪಡಿಸದೇ ಇರುವುದನ್ನು ಗಮನಿಸದೆ ವಿಚಾರಣಾ ನ್ಯಾಯಾಲಯವು ತಪ್ಪನ್ನು ಎಸಗಿರುತ್ತದೆ.

5. ಎದುರುದಾರ/ವಾದಿಯು ಪಾಲುವಿಭಾಗ ಪತ್ರ, ಹದ್ದುಬಸ್ತು ನಕಲು, ಸರ್ವೆ ಸ್ಕೆಚ್ ಮತ್ತು ಇತರ ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಅಲ್ಲದೆ ದಾವಾ ಆಸ್ತಿಗೆ ಸಂಬಂಧಿಸಿದ ಸರಿಯಾದ ಚೆಕ್ಕುಬಂದಿಗಳನ್ನು ಸಹ ತೋರಿಸಿರುವುದಿಲ್ಲ. ಆದ್ದರಿಂದ ವಾದಿಯ ದಾವೆಯು ಕಾನೂನಿನ ಅಡಿಯಲ್ಲಿ ನಿಲ್ಲುವಂತಹದಲ್ಲ.

6. ವಿಚಾರಣಾ ನ್ಯಾಯಾಲಯವು ವಾದಿ ಹಾಜರುಪಡಿಸಿದ ದಾಖಲೆಗಳು ಹಾಗೂ ಅದರಂತೆ ಅವಶ್ಯಕವಾದ ಅಂಶಗಳನ್ನು ಪರಿಗಣಿಸಲು ವಿಫಲವಾಗಿರುತ್ತದೆ ಮತ್ತು ವಾದಿಯ ಪರವಾಗಿ ಹೆಚ್ಚಿನ ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತದೆ.

7. ವಿಚಾರಣಾ ನ್ಯಾಯಾಲಯವು ವಾದಿ ಹಾಜರುಪಡಿಸಿದ ದಾಖಲಾತಿ ಸಾಕ್ಷಿ ಅದರಂತೆ ಮೌಖಿಕ ಸಾಕ್ಷಿಯನ್ನು ಪರಿಗಣಿಸದೇ ತಪ್ಪನ್ನು ಎಸಗಿರುತ್ತದೆ.

8. ವಿಚಾರಣಾ ನ್ಯಾಯಾಲಯವು ಮೇಲ್ಮನವಿದಾರ/ಪ್ರತಿವಾದಿಯು ಹಾಜರುಪಡಿಸಿದ ದಾಖಲೆಗಳು ಮತ್ತು ಸಾಕ್ಷಿಯನ್ನು ಪರಿಗಣಿಸುವಲ್ಲಿ ತಪ್ಪನ್ನು ಎಸಗಿರುತ್ತದೆ.

9. ವಿಚಾರಣಾ ನ್ಯಾಯಾಲಯವು ನೀಡಿರುವ ತೀರ್ಪು ಮತ್ತು ಡಿಕ್ರಿಯು ಕಾನೂನಿಗೆ ವಿರುದ್ಧವಾಗಿರುವುದರಿಂದ, ನ್ಯಾಯದ ಕಗ್ಗೊಲೆಯನ್ನು ತಪ್ಪಿಸುವ ಸಲುವಾಗಿ ತೀರ್ಪು ಮತ್ತು ಡಿಕ್ರಿಯು ರದ್ದುಪಡಿಸುವಂತಹದು.

10. ವಿಚಾರಣಾ ನ್ಯಾಯಾಲಯವು ಘೋಷಣೆಗೆ ಸಂಬಂಧಿಸಿದಂತೆ ನೀಡಿದ ತೀರ್ಪು ಮತ್ತು ಡಿಕ್ರಿಯು ಸೂಕ್ತ ದಾಖಲೆಗಳನ್ನು ಹಾಜರುಪಡಿಸದ ಕಾರಣದಿಂದಾಗಿ ಕಾನೂನಿನ ಅಡಿಯಲ್ಲಿ ನಿಲ್ಲುವಂತಹದಲ್ಲ.

ಆದ್ದರಿಂದ ಹೊಸದುರ್ಗದ ಪ್ರಧಾನ ಸಿವಿಲ್ ನ್ಯಾಯಾಧೀಶರು ಮೂಲ ದಾವೆ ನಂ.95/2020 ರಲ್ಲಿ ಮಾಲಿಕತ್ವದ ಹಕ್ಕಿನ ಘೋಷಣೆ ಮತ್ತು ಶಾಶ್ವತ ನಿರ್ಭಂದಕಾಜ್ಞೆಗೆ ಸಂಬಂಧಿಸಿದಂತೆ ದಿನಾಂಕಃ04-09-2025 ರಂದು ನೀಡಿರುವಂತಹ ತೀರ್ಪು ಮತ್ತು ಡಿಕ್ರಿಯನ್ನು ರದ್ದುಪಡಿಸಬೇಕೆಂದು ಮೇಲ್ಮನವಿದಾರನು ಪ್ರಾರ್ಥಿಸಿಕೊಂಡಿರುತ್ತಾನೆ.

**13**. ಈ ಮೇಲ್ಮನವಿಗಳನ್ನು ಸಲ್ಲಿಸಿದ ನಂತರ, ಎದುರುದಾರನಿಗೆ ನೋಟೀಸು ಕಳುಹಿಸಲಾಗಿ, ಎದುರುದಾರನು ತನ್ನ ವಕೀಲರ ಮೂಲಕ ಹಾಜರಾಗಿರುತ್ತಾನೆ. ವಿಚಾರಣಾ

ನ್ಯಾಯಾಲಯದ ಕಡತವನ್ನು ತರಿಸಿ, ಮೇಲ್ಮನವಿದಾರನ ಮತ್ತು ಎದುರುದಾರನ ಪರ ವಕೀಲರ ವಾದವನ್ನು ಆಲಿಸಲಾಯಿತು. ಮೇಲ್ಮನವಿದಾರನು ಈ ಮೇಲ್ಮನವಿಗಳಲ್ಲಿ ದಿವಾಣಿ ಪ್ರಕ್ರಿಯ ಸಂಹಿತೆ ಕ್ರಮಾದೇಶ 23 ನಿಯಮ 1 ಹಾಗೂ ಸಹವಾಚಕ ಕಲಂ 151 ರ ಅಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ-3 ಮತ್ತು 4 ನ್ನು ಸಲ್ಲಿಸಿ, ಅದೇ ದಾವಾ ಕಾರಣದ ಮೇಲೆ ಹೊಸ ದಾವೆಯನ್ನು ಸಲ್ಲಿಸುವ ಸಲುವಾಗಿ ಈ ಮೇಲ್ಮನವಿಗಳನ್ನು ಹಿಂದಕ್ಕೆ ಪಡೆಯಲು ಅನುಮತಿಸಬೇಕೆಂದು ಕೋರಿರುತ್ತಾನೆ. ಎದುರುದಾರ ಈ ಮಧ್ಯಂತರ ಅರ್ಜಿ ಸಂಖೆ-3 ಮತ್ತು 4 ಕ್ಕೆ ತಕರಾರನ್ನು ಸಲ್ಲಿಸಿರುತ್ತಾನೆ. ಈ ಪ್ರಕರಣವನ್ನು ಅಂತಿಮವಾಗಿ ತೀರ್ಮಾನಕ್ಕೆ ಕೈಗೆತ್ತಿಗೊಂಡಿದೆ.

**14**. ಈ ಮೇಲ್ಮನವಿಗಳಲ್ಲಿ ತೀರ್ಮಾನಿಸಬೇಕಾದ ಅಂಶಗಳು ಈ ಕೆಳಗಿನಂತಿವೆ:-

ಅಂಶ-1 ಮಧ್ಯಂತರ ಅರ್ಜಿ ಸಂಖ್ಯೆ-3 ಮತ್ತು 4 ರಲ್ಲಿ ಕೋರಿರುವಂತೆ, ಅದೇ ದಾವಾ ಕಾರಣದ ಮೇಲೆ ಹೊಸ ದಾವೆಯನ್ನು ಸಲ್ಲಿಸುವ ಸಲುವಾಗಿ, ಈ ಮೇಲ್ಮನವಿಗಳನ್ನು ಹಿಂದಕ್ಕೆ ಪಡೆಯಲು ಇರುವಂತಹ ಕಾರಣಗಳನ್ನು ಮೇಲ್ಮನವಿದಾರನು ಸಾಭೀತುಪಡಿಸಿದ್ದಾನೆಯೆ?

ಅಂಶ-2 ಯಾವ ಆದೇಶ?

**15**. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಗಿನಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 - ಸಕಾರಾತ್ಮಕ ಮತ್ತು,

ಅಂಶ-2 - ಅಂತಿಮ ಆದೇಶದಂತೆ...

**-: ಕಾರಣಗಳು:-**

**16**. **ಅಂಶ-1** – ವಿಚಾರಣಾ-ನ್ಯಾಯಾಲಯದ ಮೂಲ ದಾವಾ ಸಂ.95/2020 ರ ಸಂಪೂರ್ಣ ಕಡತವನ್ನು ಗಮನಿಸಿದ್ದೇನೆ. ವಾದಿ ಮತ್ತು ಪ್ರತಿವಾದಿ

ಸದರಿ ಮೂಲ ದಾವೆಯಲ್ಲಿ ಹಾಜರು ಪಡಿಸಿರುವಂತಹ ದಾಖಲೆಯನ್ನು ಸಂಪೂರ್ಣವಾಗಿ ಅವಲೋಕಿಸಿದ್ದೇನೆ. ವಾದಿ ತನ್ನ ವಾದಪತ್ರದಲ್ಲಿ, ವಾದಿ ದಾವಾ ತಪಶೀಲಿನ ಆಸ್ತಿಯನ್ನು ತನ್ನ ಕುಟುಂಬದಲ್ಲಿ ಆದ ಪಾಲುವಿಭಾಗದ ಮೂಲಕ ಪಡೆದುಕೊಂಡಿದ್ದು, ಸದರಿ ಆಸ್ತಿಯು ಹೊಸದುರ್ಗ ತಾಲ್ಲೂಕು, ಕಸಬಾ ಹೋಬಳಿ, ಕಂಗುವಳ್ಳಿ ಗ್ರಾಮದ ರಿ.ಸರ್ವೆ ನಂ-290/1 ರಲ್ಲಿ 3 ಎಕರೆ ಪೈಕಿ 2 ಎಕರೆ 10 ಗುಂಟೆ ಇರುತ್ತದೆ. ವಾದಿ ದಾವಾ ಆಸ್ತಿಯನ್ನು ಪಡೆದುಕೊಂಡ ನಂತರ ಇದುವರೆಗೆ ಯಾರದೇ ಅಡೆ-ತಡೆ ಇಲ್ಲದೆ ಶಾಂತಿಯುತವಾಗಿ ಸ್ವಾಧೀನಾನುಭವವನ್ನು ಹೊಂದಿರುತ್ತಾನೆ. ದಾವಾ ಆಸ್ತಿಯನ್ನು ವಾದಿ ಪಡೆದುಕೊಂಡ ನಂತರ ತನ್ನ ಹೆಸರಿಗೆ ಖಾತೆಯನ್ನು ಮಾಡಲು ಸಂಬಂಧಪಟ್ಟ ಕಂದಾಯ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿದ್ದು, ಈಗ ದಾವಾ ಆಸ್ತಿಯ ಖಾತೆ ವಾದಿಯ ಹೆಸರಿನಲ್ಲಿ ಇದ್ದು, ವಾದಿ ಕಂದಾಯವನ್ನು ಕಟ್ಟುತ್ತಾ ಬರುತ್ತಿದ್ದಾನೆ. ವಾದಿ ದಾವಾ ಆಸ್ತಿಯನ್ನು ನೀರಾವರಿ ಜಮೀನಾಗಿ ಮಾಡಿ ಅಲ್ಲಿ ಶ್ರೀಗಂದ ಮತ್ತು ತೆಂಗಿನ ಗಿಡಗಳನ್ನು ನೆಟ್ಟಿರುತ್ತಾನೆ. ವಾದಿ ದಾವಾ ಆಸ್ತಿಯ ಸುತ್ತಲೂ ಕಲ್ಲು ಕಂಬಗಳನ್ನು ನೆಟ್ಟು ಮುಳ್ಳಿನ ತಂತಿಗಳನ್ನು ಹಾಕಿಸಿರುತ್ತಾನೆ. ದಾವಾ ಆಸ್ತಿಯಲ್ಲಿ ಗ್ರಾಮ ಪಂಚಾಯ್ತಿ ರಸ್ತೆಯು ಹೋಗಿರುತ್ತದೆ. ಆದರೆ, ಅದು ನಕಾಶೆ ಕಂಡ ರಸ್ತೆ ಅಲ್ಲ. ಪ್ರತಿವಾದಿಯ ಆಸ್ತಿಯು ದಾವಾ ಆಸ್ತಿಯ ಉತ್ತರ ದಿಕ್ಕಿನಲ್ಲಿ ಇರುತ್ತದೆ. ನಕಾಶೆ ರಸ್ತೆಯು ಪ್ರತಿವಾದಿಯ ಜಮೀನಿನ ಮೂಲಕ ಹೋಗಿರುತ್ತದೆ. ಸದರಿ ನಕಾಶೆ ರಸ್ತೆಯು ಕೊರಟಿಗೆರೆ ಗ್ರಾಮದಿಂದ ಚೌಳಹಿರಿಯೂರು-ಕಂಗುವಳ್ಳಿ ಪಿ.ಡಬ್ಲ್ಯೂ.ಡಿ ರಸ್ತೆವರೆಗೆ ಇರುತ್ತದೆ. ಪಿ.ಡಬ್ಲ್ಯೂ.ಡಿ ರಸ್ತೆಯು ಪ್ರತಿವಾದಿಯ ಜಮೀನಿನ ಉತ್ತರ ದಿಕ್ಕಿನಲ್ಲಿ ಇದ್ದು, ಸದರಿ ಪಿ.ಡಬ್ಲ್ಯೂ.ಡಿ ರಸ್ತೆಯು ಚೌಳಹಿರಿಯೂರಿನಿಂದ ಕಂಗುವಳ್ಳಿವರೆಗೆ ಇರುತ್ತದೆ. ಅಕ್ಕ-ಪಕ್ಕದ ಜಮೀನಿನ ಮಾಲಕರು ತಮ್ಮ ಜಮೀನುಗಳಿಗೆ ನಕಾಶೆ ದಾರಿಯ ಮೂಲಕ ಹೋಗುತ್ತಾರೆ. ಪ್ರತಿವಾದಿಯು ಬಲಶಾಲಿಯಾದ ವ್ಯಕ್ತಿಯಾಗಿದ್ದು, ಅವನು ದಾವಾ ಆಸ್ತಿಯಲ್ಲಿ ಉತ್ತರದ ಕಡೆ ಗ್ರಾಮ ಪಂಚಾಯ್ತಿ ರಸ್ತೆಯಿಂದ ತನ್ನ ಜಮೀನಿಗೆ ಹೋಗಲು ರಸ್ತೆಯನ್ನು

ನಿರ್ಮಾಣ ಮಾಡಲು ಪ್ರಯತ್ನ ಮಾಡುತ್ತಿದ್ದಾನೆ ಎಂದು ಆರೋಪಿಸಿರುವ ಅಂಶಗಳಿಗೆ ಪೂರಕವಾಗಿ ವಾದಿ ತಾನು ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, ತನ್ನ ಮುಖ್ಯ ವಿಚಾರಣೆಯಲ್ಲಿ ವಾದಪತ್ರದ ಅಂಶಗಳನ್ನು ವಿಧಿವತ್ತಾಗಿ ಪುನರ್ವರ್ತಿಸಿರುತ್ತಾನೆ. ಅಲ್ಲದೆ, ವಾದಿಯ ಪರ ಸಾಕ್ಷಿ ನುಡಿದ ಪಿ.ಡಬ್ಲೂ-2 ತನ್ನ ಮುಖ್ಯ ವಿಚಾರಣೆಯ ಸಾಕ್ಷಿಯಲ್ಲಿ ವಾದಿಯ ಕೇಸಿಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾನೆ.

**17**. ಪ್ರತಿವಾದಿ ತನ್ನ ಲಿಖಿತ ಹೇಳಿಕೆಯ ಎದುರುಕ್ಲೇಮಿನಲ್ಲಿ ಸರ್ವೇ ನಂ-112 ರಲ್ಲಿ ಸುಮಾರು 5 ಎಕರೆ 14 ಗುಂಟೆ ಸರ್ಕಾರದ ಜಮೀನು ಇದ್ದು, ಅದರಲ್ಲಿ 7 ಗುಂಟೆಯು ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಇರುತ್ತದೆ. ಸದರಿ ಜಮೀನು ಕಂಗುವಳ್ಳಿ ಗ್ರಾಮದ ಜಮೀನು ಸರ್ವೇ ನಂ 291 ರಲ್ಲಿ ಕೂಡಿಕೊಂಡಿದ್ದು, ಅದನ್ನು ವಾದಿ ಮತ್ತು ಪ್ರತಿವಾದಿ ಹಾಗೂ ಅಕ್ಕ-ಪಕ್ಕದ ಜಮೀನಿನ ಮಾಲಕರು ಎತ್ತಿನ ಬಂಡಿಯನ್ನು ತೆಗೆದುಕೊಂಡು ಹೋಗಿ ಬರಲು ಮತ್ತು ವ್ಯವಸಾಯದ ಉಪಕರಣಗಳನ್ನು ಸಾಗಿಸಲು ಉಪಯೋಗಿಸುತ್ತಿದ್ದಾರೆ. ಸದರಿ ಬಂಡಿ ದಾರಿಯು ಪಿ.ಡಬ್ಲೂ.ಡಿ ರಸ್ತೆಯಿಂದ ದಕ್ಷಿಣದಿಂದ-ಉತ್ತರಕ್ಕೆ ಹೋಗುತ್ತಿರುವುದು ವಾದಿಯ ತಿಳುವಳಿಕೆಗೆ ಇರುತ್ತದೆ. ಅದು ವಾದಿಯ ಜಮೀನಿನ ಪೂರ್ವದ ಅಂಚಿನ ಮೂಲಕ ಹಾದು ಹೋಗುತ್ತದೆ ಎಂದು ಆರೋಪಿಸಿರುವ ಅಂಶಗಳಿಗೆ ಪೂರಕವಾಗಿ ಪ್ರತಿವಾದಿ ತಾನು ಡಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, ತನ್ನ ಮುಖ್ಯ ವಿಚಾರಣೆಯಲ್ಲಿ ತನ್ನ ಎದುರುಕ್ಲೇಮಿನ ಅಂಶಗಳನ್ನು ವಿಧಿವತ್ತಾಗಿ ಪುನರ್ವರ್ತಿಸಿರುತ್ತಾನೆ.

**18**. ಮೇಲ್ಮನವಿದಾರ/ಪ್ರತಿವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಪ್ರತಿವಾದಿಯು ಕಂಗುವಳ್ಳಿ ಗ್ರಾಮದ ಸರ್ವೇ ನಂ-112 ಕ್ಕೆ ಸಂಬಂಧಿಸಿದಂತೆ ಎದುರುಕ್ಲೇಮನ್ನು ಕೇಳಿದ್ದು, ಆದರೆ ಸದರಿ ಜಮೀನು ಸರ್ಕಾರಕ್ಕೆ ಸಂಬಂಧಪಟ್ಟಿದ್ದಾಗಿದ್ದರಿಂದ, ಪ್ರತಿವಾದಿಯು ಪಕ್ಕದ ಜಮೀನು ಸರ್ವೇ ನಂ-291 ರ

ಮೂಲಕ ಬಂಡಿದಾರಿ ಹೋಗುತ್ತಿದ್ದ ಕಾರಣ, ಅನುಭೋಗದ ಹಕ್ಕನ್ನು ಕೋರಿ ಸರ್ವೇ ನಂ-291 ಕ್ಕೆ ಸಂಬಂಧಿಸಿದಂತೆ ಅದೇ ದಾವಾ ಕಾರಣದ ಮೇಲೆ ಹೊಸ ದಾವೆಯನ್ನು ಸಲ್ಲಿಸುವುದು ಪ್ರತಿವಾದಿಗೆ ಅವಶ್ಯವಾಗಿದ್ದು, ಒಂದು ವೇಳೆ ಅನುಮತಿಯನ್ನು ನೀಡದೆ ಇದ್ದರೆ, ಮೇಲ್ಮನವಿದಾರ/ಪ್ರತಿವಾದಿಗೆ ತುಂಬಲಾರದಂತಹ ನಷ್ಟ ಉಂಟಾಗುತ್ತದೆ. ಅಲ್ಲದೆ, ಎದುರುದಾರ/ವಾದಿಗೆ ಯಾವುದೆ ರೀತಿಯ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ. ಆದ್ದರಿಂದ, ಈ ಮೇಲ್ಮನವಿಗಳನ್ನು ಹಿಂದಕ್ಕೆ ಪಡೆದು, ಎದುರುಕ್ಲೇಮಿನಲ್ಲಿ ಹೇಳಿದ ಅದೆ ದಾವಾ ಕಾರಣದ ಮೇಲೆ ಹೊಸ ದಾವೆಯನ್ನು ಸಲ್ಲಿಸಲು ಮೇಲ್ಮನವಿದಾರ/ಪ್ರತಿವಾದಿಗೆ ಸ್ವತಂತ್ರವನ್ನು ನೀಡಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**19**. ಎದುರುದಾರ/ವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಈ ಮೇಲ್ಮನವಿಯ ಹಂತದಲ್ಲಿ ಮೇಲ್ಮನವಿಯನ್ನು ಹಿಂದಕ್ಕೆ ಪಡೆಯಲು ಯಾವುದೇ ಸ್ವತಂತ್ರವನ್ನು ಹೊಂದಿರುವುದಿಲ್ಲ. ಅಲ್ಲದೆ, ವಿಚಾರಣಾ ನ್ಯಾಯಾಲಯವು ಸರಿಯಾದ ವಿವಾದಾಂಶಗಳನ್ನು ರಚಿಸಿ, ಉಭಯಪಕ್ಷಗಾರರ ಪರ ಇರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷಿಯನ್ನು ಪರಿಗಣಿಸಿ, ಸರಿಯಾದ ಕಾರಣಗಳನ್ನು ನೀಡಿ ತೀರ್ಪನ್ನು ನೀಡಿರುವ ಕಾರಣ, ಮಧ್ಯಂತರ ಅರ್ಜಿ ಸಂಖ್ಯೆ-3 ಮತ್ತು 4 ರಲ್ಲಿ ಕೋರಿದಂತೆ, ಅದೇ ದಾವಾ ಕಾರಣದ ಮೇಲೆ ಹೊಸ ದಾವೆಯನ್ನು ಸಲ್ಲಿಸುವ ಸಲುವಾಗಿ ಮೇಲ್ಮನವಿದಾರನಿಗೆ/ ಪ್ರತಿವಾದಿಗೆ ಸ್ವತಂತ್ರವನ್ನು ನೀಡಿ, ಈ ಮೇಲ್ಮನವಿಯನ್ನು ಹಿಂದಕ್ಕೆ ಪಡೆಯಲು ಅನುಮತಿಸಲು ಬರುವುದಿಲ್ಲ. ಆದ್ದರಿಂದ, ಈ ಮಧ್ಯಂತರ ಅರ್ಜಿಗಳನ್ನು ಹಾಗೂ ಮೇಲ್ಮನವಿದಾರನ ಮೇಲ್ಮನವಿಗಳನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**20**. ಮೇಲ್ಮನವಿದಾರನು ಈ ಮೇಲ್ಮನವಿಗಳಲ್ಲಿ, ಮಧ್ಯಂತರ ಅರ್ಜಿ ಸಂಖ್ಯೆ -3 ಮತ್ತು 4 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 23 ನಿಯಮ 1 ಹಾಗೂ ಸಹವಾಚಕ ಕಲಂ 151 ರ ಅಡಿಯಲ್ಲಿ, ತನ್ನ ಪ್ರಮಾಣಪತ್ರಗಳೊಂದಿಗೆ ಸಲ್ಲಿಸಿ, ಈ ಮೇಲ್ಮನವಿಗಳನ್ನು ಹಿಂದಕ್ಕೆ ಪಡೆದು, ಎದುರುಕ್ಲೇಮಿನಲ್ಲಿ ಹೇಳಿದ ಅದೇ ದಾವಾ ಕಾರಣದ ಮೇಲೆ ಹೊಸ ದಾವೆಯನ್ನು ಸಲ್ಲಿಸಲು ತನಗೆ ಅನುಮತಿಸಬೇಕೆಂದು ಕೋರಿದ್ದು, ಆದರೆ ಎದುರುದಾರನು ಈ ಮಧ್ಯಂತರ ಅರ್ಜಿ ಸಂಖ್ಯೆ 3 ಮತ್ತು 4 ಕ್ಕೆ ತಕರಾರುಗಳನ್ನು ಸಲ್ಲಿಸಿ, ಅವುಗಳಲ್ಲಿ ವಿವರವಾದ ಕಾರಣಗಳನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿ ಸಂಖ್ಯೆ-3 ಮತ್ತು 4 ನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾನೆ. ಆದರೆ, ಕರ್ನಾಟಕ ಮಾನ್ಯ ಉಚ್ಚನ್ಯಾಯಾಲಯದ ನಿರ್ಧರಿತ ಪ್ರಕರಣವಾದ RSA No.595/2014(B.M. Veerabhadrappa V/s B.M. Basavarajappa and another) ರಲ್ಲಿ ಮೆಮೋ ಸಲ್ಲಿಸಿದ್ದರ ಮೇರೆಗೆ, ಮೇಲ್ಮನವಿಯನ್ನು ಹಿಂದಕ್ಕೆ ಪಡೆದು, ಅದೇ ದಾವಾ ಕಾರಣದ ಮೇಲೆ ಹೊಸ ದಾವೆಯನ್ನು ಸಲ್ಲಿಸಲು ಅನುಮತಿಸಿರುವುದರಿಂದ, ಸದರಿ ನಿರ್ಧರಿತ ಪ್ರಕರಣದ ತತ್ವದಂತೆ, ಈ ಹಂತದಲ್ಲಿ ಈ ನ್ಯಾಯಾಲಯವು ಮೇಲ್ಮನವಿದಾರನ ಈ ಮೇಲ್ಮನವಿಗಳನ್ನು ಹಿಂದಕ್ಕೆ ಪಡೆದು, ಎದುರುಕ್ಲೇಮಿನಲ್ಲಿ ಹೇಳಿದ ಅದೇ ದಾವಾ ಕಾರಣದ ಮೇಲೆ ಹೊಸ ದಾವೆಯನ್ನು ಸೂಕ್ತವಾದ ನ್ಯಾಯಾಧಿಕರಣ ಹೊಂದಿದ ನ್ಯಾಯಾಲಯದಲ್ಲಿ ಸಲ್ಲಿಸಲು ಪ್ರತಿವಾದಿಗೆ ಅನುಮತಿಸಬಹುದಾಗಿರುತ್ತದೆ. ಆದ್ದರಿಂದ, ಮೇಲ್ಮನವಿದಾರ/ಪ್ರತಿವಾದಿಗೆ ಈ ಮೇಲ್ಮನವಿಗಳನ್ನು ಹಿಂದಕ್ಕೆ ಪಡೆದು, ಎದುರುಕ್ಲೇಮಿನಲ್ಲಿ ಹೇಳಿದ ಅದೆ ದಾವಾ ಕಾರಣದ ಮೇಲೆ ಹೊಸ ದಾವೆಯನ್ನು ಸಲ್ಲಿಸಲು ಅನುಮತಿಸುವುದು ಅವಶ್ಯವಾಗಿರುತ್ತದೆ ಎಂದು ತೀರ್ಮಾನಿಸಿ, **ಅಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**21.** <u>ಅಂಶ**-2**</u> **–** ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದೆ:

**ಆದೇಶ**

ಮೂಲ ದಾವೆ ನಂ-95/2020 ರ ಎದುರುಕ್ಲೇಮಿನಲ್ಲಿ ಹೇಳಿದ ಅದೆ ದಾವಾ ಕಾರಣದ ಮೇಲೆ ಹೊಸ ದಾವೆಯನ್ನು ಸೂಕ್ತವಾದ ನ್ಯಾಯಾಧಿಕರಣ ಹೊಂದಿದ ನ್ಯಾಯಾಲಯದಲ್ಲಿ ಸಲ್ಲಿಸಲು ಸ್ವಾತಂತ್ರ್ಯವನ್ನು ನೀಡಿ, ಮಧ್ಯಂತರ ಅರ್ಜಿ ಸಂಖ್ಯೆ -3 ಮತ್ತು 4 ರ ಪ್ರಕಾರ, ಈ ಮೇಲ್ಮನವಿಗಳನ್ನು ಹಿಂದಕ್ಕೆ ಪಡೆಯಲು ಅನುಮತಿಸಿ, ಮೇಲ್ಮನವಿದಾರನ ಮೇಲ್ಮನವಿಗಳನ್ನು ತಲಾ 2,000/- ರೂಗಳ ಖರ್ಚಿನ ಮೇಲೆ ವಜಾಗೊಳಿಸಲಾಗಿದೆ.

ವಿಚಾರಣಾ ನ್ಯಾಯಾಲಯದ ಕಡತದ ಜೊತೆ ಈ ತೀರ್ಪಿನ ನಕಲನ್ನು ವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಿಕೊಡತಕ್ಕದ್ದು.

ಖರ್ಚಿನ ಮೊತ್ತವನ್ನು ಮೇಲ್ಮನವಿದಾರ/ಪ್ರತಿವಾದಿಯು ಎದುರುದಾರ/ವಾದಿಗೆ ಕೊಡತಕ್ಕದ್ದು.

ಮೂಲ ತೀರ್ಪನ್ನು ಮೇಲ್ಮನವಿ ಸಂಖ್ಯೆ 35/2025 ರಲ್ಲಿಟ್ಟು, ಅದರ ನಕಲನ್ನು ಮೇಲ್ಮನವಿ ಸಂಖ್ಯೆ 36/2025 ರಲ್ಲಿ ಇಡತಕ್ಕದ್ದು.

ಮೇಲ್ಕಂಡಂತೆ ಡಿಕ್ರಿ ಬರೆಯತಕ್ಕದ್ದು.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ, ಇಂದು ದಿನಾಂಕ **04**ನೇ ಜೂನ್ **-2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-

**(ವೈ. ಕೆ. ಬೇನಾಳ),**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಹೊಸದುರ್ಗ.